# ನವಿಲುಗನ್ನಡಿ

ಜೂನ್, 2016ರ 'ಮಯೂರ'ದ ಮುಖಪುಟ ಆಕರ್ಷಿಸಿತು. ಗೋಪೀನಾಥ್ ರಾವ್ ಅವರ 'ರಾಜೀವಲೋಚನ' ಕತೆ ತಿಳಿಹಾಸ್ಯದಿಂದ ಮನರಂಜಿಸಿತು. ತಿಮ್ಮಪ್ಪ ಟಿ. ಅವರ 'ಕತೆಯಾದಳು ಬಾಲೆ' ಕತೆ ಮನಮಿಡಿಯುವಂತಿತ್ತು. ಈ ಸಂಚಿಕೆ ಉತ್ತಮ ಕತೆಗಳಿಂದ ಕೂಡಿತ್ತು.

**ವಿ. ಹೇಮಂತಕುಮಾರ್, ಬೆಂಗಳೂರು**

ಜಿ.ವಿ. ಗಣೇಶಯ್ಯ ಅವರ ನಗೆ ಬರಹ 'ಆಸೆಯು ಯಾವುದಕ್ಕೆ ಕಾರಣ?' ಹಗುರ ಧಾಟಿಯಲ್ಲಿ ಗಂಭೀರ ವಿಚಾರಗಳನ್ನು ಹೇಳಿದೆ.

**ಎಸ್.ಬಿ. ನಾಗರಾಜ, ತುಮಕೂರು**

ಪಿ.ಪಿ. ಉಪಾಧ್ಯ ಅವರ ಲಘು ಬರಹ 'ವೈದ್ಯೋ ನಾರಾಯಣ ಹರಿಃ' ಈಗಿನ ವೈದ್ಯಲೋಕಕ್ಕೆ ಕನ್ನಡಿ ಹಿಡಿದಿದೆ.

**ನಾರಾಯಣ ಯಾಜಿ, ಶಿರಾಲಿ**

ಮೀನಾಕ್ಷಿ ಹೆಂಗವಳ್ಳಿಯವರ ಪ್ರಬಂಧ 'ಹರಿ ಹರೀ ಗೋವುಗಳು' ಹಳ್ಳಿಯ ಜಗತ್ತಿನಲ್ಲಿ ನಾವೂ ಓಡಾಡಿದ ಅನುಭವವನ್ನು ಕೊಟ್ಟಿತು.

**ದಾಕ್ಷಾಯಿಣಿ ಎಚ್.ಎನ್., ಸಾಗರ**

'ನಶಿಸಿ ಹೋಗುತ್ತಿರುವ ಕುಲಕಸುಬುಗಳ ಕುರಿತು ಇರುವ ಶ್ರೀಧರ ಬಳಗಾರ ಅವರ 'ಹದ' ಕತೆ ಓದಿ ಸಂತೋಷವಾಯಿತು. ಉತ್ತರ ಕನ್ನಡ ಜಿಲ್ಲೆಯ ಭಾಷೆಯ ಸೊಗಡು ಕತೆಗೆ ಆಪ್ತತೆ, ಆರ್ದ್ರತೆಯನ್ನು ತಂದಿದೆ.

ಪ್ರವೀಣಕುಮಾರ್ ಜಿ. ಅವರ ಕತೆ 'ರಾಧಾ ಮೋಹನ' ಚೆನ್ನಾಗಿದೆ.

**ಮೋಹನ ರು. ಹಣಗಿ, ಅಮೀನಗಡ**




'ಮಾಡೆಲ್ ಲಕ್ಷಾಧೀಶ' (ಇಂಗ್ಲಿಷ್ ಮೂಲ: ಆಸ್ಕರ್ ವೈಲ್ಡ್) ಕತೆ ಓದಿಸಿಕೊಂಡು ಹೋಯಿತು. ಮೂಲದಲ್ಲೇ ಕತೆಯನ್ನು ಈ ಹಿಂದೆ ಓದಿದ್ದೆ. ಟಿ.ಎಸ್. ರಘುನಾಥ್ ಅವರ ಅನುವಾದ ಚೆನ್ನಾಗಿದೆ.

**ವೆಂಕಟೇಶ್ ಎಂ.ಎ., ದಾವಣಗೆರೆ**

ಅಭಿನಯ ಹಾಗೂ ಗಮಕ ಕಲೆಯಿಂದ ರಂಗಭೂಮಿಯಲ್ಲಿ ಸಂಚಲನ ಮೂಡಿಸಿದ್ದ ಜೋಳದರಾಶಿ ದೊಡ್ಡನಗೌಡರದು ಅನನ್ಯ ಸಾಧನೆ. 'ರಂಗವಿಹಂಗಮ' ಅಂಕಣದಲ್ಲಿ ಈ ಪ್ರತಿಭೆಯ ಪರಿಚಯ ಸಕಾಲಿಕ.

**'ಅಮೃತೇಶ್' ತಂಡರ, ಅಣ್ಣಿಗೇರಿ**

'ನೆನಪು ಕಹಿಯಲ್ಲ' (ಪರಂಜ್ಯೋತಿ) ಲೇಖನ ಓದಿ, ಸಾಹಿತಿ ಶಿವರಾಮ ಕಾರಂತ ಹಾಗೂ ಅವರ ಮಗಳು ಕ್ಷಮಾ ಅವರ ಚಿತ್ರಗಳನ್ನು ನೋಡಿ ತುಂಬಾ ಆನಂದವಾಯಿತು.

**ಸದಾನಂದ ಹೆಗಡೆಕಟ್ಟೆ, ಮೂಡಬಿದರೆ**